ಅಳವಡಿಸಿಕೊಳ್ಳಲು ರೈತರಿಗೆ ಪ್ರೋತ್ಸಾಹ ನೀಡುವುದು. ಕೃಷಿ ವರಮಾನವು ವಿಶೇಷವಾಗಿ ವಿಪತ್ತೊದಗಿದ ವರ್ಷಗಳಲ್ಲಿ ಸ್ಥಿರವಾಗಿರುವಂತೆ ಮಾಡಲು ನೆರವಾಗುವುದಕ್ಕೆ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

ಶೇಕಡ 3ರ ಬಡ್ಡಿದರದ ಸಾಲ ಸೌಲಭ್ಯ

510 (1015) ಶ್ರೀ ಹ್ಯಾರಿಸ್ ಎನ್ ಎ. (ಶಾಂತಿನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೇಕಡಾ 3ರ ಬಡ್ಡಿ ದರದ ಸಾಲ ಸೌಲಭ್ಯದ ವಿವರಗಳೇನು? ಈ ಯೋಜನೆಯಡಿ ನೀಡಿದ ಸಾಲದ ಒಟ್ಟು ಮೊತ್ತವೆಷ್ಟು?

ಆ) ಈ ಸಾಲ ಸೌಲಭ್ಯದ ಜಿಲ್ಲಾವಾರು ಫಲಾನುಭವಿಗಳ ಸಂಖ್ಯೆ ಎಷ್ಟು?

ಇ) ಘೋಷಿತ ಯೋಜನೆಯು ಸೂಕ್ತ ರೀತಿಯಲ್ಲಿ ಫಲಾನುಭವಿಗಳಿಗೆ ಲಭ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ, ಈ ಯೋಜನೆಯಲ್ಲಿನ ಲೋಪದೋಷಗಳ ನಿವಾರಣೆಗಾಗಿ ಸರ್ಕಾರದ ಕ್ರಮಗಳೇನು?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) 2008–09 ನೇ ಸಾಲಿನಿಂದ ಶೇಕಡ 3 ರ ಬಡ್ಡಿ ದರದಲ್ಲಿ ಕೃಷಿ ಸಾಲವನ್ನು ವಿತರಿಸಲಾಗಿದೆ. 2008–09ನೇ ಸಾಲಿನಲ್ಲಿ ರೂ.3576.98 ಕೋಟಿಗಳು ಹಾಗೂ 2009–10 ನೇ ಸಾಲಿನಲ್ಲಿ (ದಿ: 1–4–2009 ರಿಂದ 28–02–2010 ರವರೆಗೆ) ರೂ.3099.40 ಕೋಟಿಗಳನ್ನು ಕೃಷಿ ಸಾಲವನ್ನು ನೀಡಲಾಗಿದೆ. ಈ ಯೋಜನೆಯ ಮುಖ್ಯ ವಿವರಗಳು ಈ ಕೆಳಕಂಡಂತಿದೆ.

1) ಈ ಯೋಜನೆಯಡಿಯಲ್ಲಿ ಶೇ.3 ರ ಬಡ್ಡಿ ದರವು ದಿ: 1–4–2009 ರಿಂದ ವಿವಿಧ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಿಂದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ಪಡೆದಿರುವಂತಹ ರೈತರುಗಳಿಗೆ ಅನ್ವಯವಾಗುತ್ತದೆ.

2) ಈ ಯೋಜನೆಯು ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ನೀಡುವ ಕೃಷಿಯೇತರ ಸಾಲಗಳಿಗೆ ಅನ್ವಯಿಸುವುದಿಲ್ಲ.

3) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ ಶೇಕಡ 1ರ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸತಕ್ಕದ್ದು.

4) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಅಂತಿಮ ವಾಗಿ ರೈತರಿಗೆ ಶೇಕಡ 3 ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸತಕ್ಕದ್ದು.

5) ಈ ಯೋಜನೆಯಡಿಯಲ್ಲಿ ಸರ್ಕಾರದ ಬದ್ಧತೆಯು ಸಾಲಗಳ ಅವಧಿಗೆ ಮಾತ್ರ ಅಂದರೆ ಸಾಲ ಪಡೆದ ದಿನಾಂಕದಿಂದ ರೈತರು ಸಾಲ ಮರುಪಾವತಿಸಬೇಕಾದ ದಿನಾಂಕದವರೆಗೆ ಸೀಮಿತವಾಗಿರುತ್ತದೆ. ರೈತರು ಸಕಾಲದಲ್ಲಿ ಸಾಲ ಮರುಪಾವತಿಸದೆ ಸುಸ್ತಿಯಾದಲ್ಲಿ, ಸುಸ್ತಿಯಾದ ರೈತರು ಸುಸ್ತಿಯಾದ ದಿನಾಂಕದಿಂದ ಸಹಕಾರ ಸಂಘಗಳು ವಿಧಿಸುವ ಸಾಮಾನ್ಯ ಬಡ್ಡಿ ದರ ಮತ್ತು ಇತರ ಖರ್ಚುಗಳ ಸಹಿತ ಕೃಷಿ ಸಾಲ ಮರುಪಾವತಿಸಲು ಜವಾಬ್ದಾರರಾ ಗಿರುತ್ತಾರೆ. ಈ ಯೋಜನೆಯಡಿ ಬಡ್ಡಿ ಸಹಾಯಧನವು ಪೂರ್ಣವಾಗಿ ಮರುಪಾವತಿಯಾಗುವ ಸಾಲಗಳಿಗೆ ಮಾತ್ರ ದೊರೆಯಲಿದೆ ಮತ್ತು ಸಾಲವು ರೈತರಿಗೆ ಬಿಡುಗಡೆಯಾದ ದಿನಾಂಕದಿಂದ ಪ್ರಾರಂಭವಾಗಿ ಸಾಲ ಮರುಪಾವತಿಯ ಗಡುವಿನ ದಿನಾಂಕದವರೆಗೆ ಅಥವಾ ಪೂರ್ಣವಾಗಿ ಸಾಲ ಮರುಪಾವತಿಯಾದ ದಿನಾಂಕ ಇದರಲ್ಲಿ ಯಾವುದು ಮೊದಲೋ ಆ ಅವಧಿಗೆ ಬಡ್ಡಿ ಸಹಾಯಧನವು ಅನ್ವಯಿಸುತ್ತದೆ. ಈ ಸಾಲಗಳು ಸುಸ್ತಿಯಾದರೂ ಕೂಡ ಸರ್ಕಾರದ ಬದ್ಧತೆಯು ಸಾಲದ ಅವಧಿಗೆ ಸೀಮಿತ ವಾಗಿರುತ್ತದೆ.

6) ಈ ಯೋಜನೆಯು ವಸೂಲಾತಿಗೆ ಜೋಡಣೆಯಾಗಿರುವ ಪ್ರಯುಕ್ತ ಕೃಷಿ ಪತ್ತಿನ ಸಹಕಾರ ಸಂಘಗಳು/ ಬ್ಯಾಂಕುಗಳು ಬಡ್ಡಿ ಸಹಾಯಧನವನ್ನು ಕೃಷಿ ಸಾಲಗಳ ವಸೂಲಾತಿಯ ಪ್ರಮಾಣವನ್ನು ಆಧರಿಸಿ ತ್ರೈಮಾಸಿಕ ಕ್ಲೇಮು ಬಿಲ್ಲುಗಳನ್ನು

ಸಿದ್ಧಪಡಿಸಿ ನಿಯೋಜಿಸಲ್ಪಟ್ಟಿರುವ ಲೆಕ್ಕಪರಿಶೋಧಕರಿಂದ ಪ್ರಮಾಣೀಕರಿಸಿದ ನಂತರ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಿಂದ ದೃಢೀಕರಿಸಿ ನಿಬಂಧಕರ ಮಂಜೂರಾತಿಗಾಗಿ ಅಪೆಕ್ಸ್ ಬ್ಯಾಂಕಿಗೆ ಬೇಡಿಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

ಆ) ರಾಜ್ಯದಲ್ಲಿ 2008–09 ನೇ ಸಾಲಿನಲ್ಲಿ ಒಟ್ಟು 12,96,017 ರೈತರು ಮತ್ತು 2009–10 ನೇ ಸಾಲಿನಲ್ಲಿ ಅಂದರೆ ದಿ: 1–4–2009 ರಿಂದ 28–2–2010 ರ ವರೆಗೆ 10,96,086 ಜನ ರೈತರಿಗೆ ಸಹಕಾರ ಸಂಘಗಳ ಮತ್ತು ಡಿ.ಸಿ.ಸಿ. ಬ್ಯಾಂಕುಗಳ ಮೂಲಕ ಕೃಷಿ ಸಾಲ ವಿತರಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಇ) ಘೋಷಿತ ಯೋಜನೆಯು ಸೂಕ್ತ ರೀತಿಯಲ್ಲಿ ಫಲಾನುಭವಿಗಳಿಗೆ ಲಭ್ಯವಾಗುತ್ತಿದೆ.

ಈ) ಅನ್ವಯಿಸುವುದಿಲ್ಲ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹ್ಯಾರೀಸ್ ಎನ್.ಎ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1015 ಕ್ಕೆ ಅನುಬಂಧ–1

ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳ ವಿತರಣೆ ವಿವರಗಳು –3%

ಕ್ರ ಸಂ.	ಜಿಲ್ಲೆಯ ಹೆಸರು	2008–09	2009–10	ಒಟ್ಟು
		ಸಂಖ್ಯೆ	ಸಂಖ್ಯೆ	ಸಂಖ್ಯೆ
1	2	3	4	5
1	ಬೆಂಗಳೂರು	34224	44100	78324
2	ಕೋಲಾರ	5	925	930
3	ತುಮಕೂರು	26622	37342	63964
4	ಚಿತ್ರದುರ್ಗ	16315	20320	36635
5	ಶಿವಮೊಗ್ಗ	49386	52581	101967
6	ದಾವಣಗೆರೆ	53701	50849	104550

7	ಮೈಸೂರು ಮತ್ತು ಚಾಮರಾಜನಗರ	26729	28442	55171
8	ಕೊಡಗು	22590	26566	49156
9	ಮಂಡ್ಯ	48827	34205	83032
10	ಹಾಸನ	43508	33945	77453
11	ಚಿಕ್ಕಮಗಳೂರು	7190	7436	14626
12	ಮಂಗಳೂರು ಮತ್ತು ಉಡುಪಿ	71882	69722	141604
13	ಬೆಳಗಾಂ	283885	155644	439529
14	ಬಿಜಾಪುರ	124472	65891	190363
15	ಬಾಗಲಕೋಟೆ	141917	108397	250314
16	ಧಾರವಾಡ, ಗದಗ ಮತ್ತು ಹಾವೇರಿ	29366	29537	58903
17	ಉತ್ತರ ಕನ್ನಡ	49357	58227	107584
18	ಗುಲ್ಬರ್ಗಾ	98435	41844	140279
19	ರಾಯಚೂರು ಮತ್ತು ಕೊಪ್ಪಳ	44322	41327	85649
20	ಬೀದರ್	96017	145722	241739
21	ಬಳ್ಳಾರಿ	27267	30336	57603
	ಒಟ್ಟು	**1296017**	**1083358**	**2379375**

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹ್ಯಾರೀಸ್ ಎನ್.ಎ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1015 ಅನುಬಂಧ–2

ದೀರ್ಘಾವಧಿ ಕೃಷಿ ಸಾಲಗಳ ವಿತರಣೆ ವಿವರಗಳು – 3%

ಕ್ರ. ಸಂ.	ಜಿಲ್ಲೆಯ ಹೆಸರು	2008–09	2009–10	ಒಟ್ಟು
		ಸಂಖ್ಯೆ	ಸಂಖ್ಯೆ	ಸಂಖ್ಯೆ
1	2	3	4	5
1	ಬೆಂಗಳೂರು	427	329	756
2	ಕೋಲಾರ	748	228	976
3	ತುಮಕೂರು	1438	910	2348
4	ಚಿತ್ರದುರ್ಗ	193	24	217
5	ಶಿವಮೊಗ್ಗ	2693	1883	4576
6	ದಾವಣಗೆರೆ	547	276	823
7	ಮೈಸೂರು	623	434	1057
8	ಚಾಮರಾಜನಗರ	132	119	251
9	ಕೊಡಗು	372	272	644
10	ಮಂಡ್ಯ	795	305	1100
11	ಹಾಸನ	2108	1232	3340
12	ಚಿಕ್ಕಮಗಳೂರು	2931	733	3664
13	ಮಂಗಳೂರು	2090	1809	3899
14	ಉಡುಪಿ	634	475	1109
15	ಬೆಳಗಾಂ	651	391	1042
16	ಬಿಜಾಪುರ	519	318	837
17	ಬಾಗಲಕೋಟೆ	600	388	988
18	ಧಾರವಾಡ,	648	203	851
19	ಗದಗ	150	39	189
20	ಹಾವೇರಿ	378	235	613
21	ಉತ್ತರ ಕನ್ನಡ	3887	1831	5718
22	ಗುಲ್ಬರ್ಗಾ	185	32	217

23	ರಾಯಚೂರು	42	4	46
24	ಕೊಪ್ಪಳ	95	6	101
25	ಬೀದರ್	82	23	105
26	ಬಳ್ಳಾರಿ	359	150	509
	ಒಟ್ಟು	**23327**	**12649**	**35976**

ದಾಳಿಂಬೆ ಬೆಳೆಗಳು

511 (634) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದಾಳಿಂಬೆ ಬೆಳೆ ಬೆಳೆಯುವ ಜಿಲ್ಲೆಗಳು ಎಷ್ಟು ಹಾಗೂ ಯಾವುವು (ವಿವರ ನೀಡುವುದು);

ಆ) ಈ ದಾಳಿಂಬೆ ಬೆಳೆಗೆ ದುಂಡಾಣು ರೋಗವು ಹರಡಿರುವು ದರಿಂದ ರಾಜ್ಯದ ರೈತರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ದುಂಡಾಣು ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈ ರೋಗವನ್ನು ತಡೆಗಟ್ಟಲು ಕೇಂದ್ರ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಉ) ಹಾಗಿದ್ದಲ್ಲಿ, ಈ ಯೋಜನೆಯು ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವುದೇ;

ಊ) ಹಾಗಿದ್ದಲ್ಲಿ, ಈ ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಹದಿಮೂರು.

ಅವುಗಳ ವಿವರಗಳು ಕೆಳಗಿನಂತಿವೆ :